# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್) : ಯು40109ಕೆಎ1999ಎಸ್‌ಜಿ025521

## ಅಧಿಸೂಚನೆ – ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆ

**ಸಂಖ್ಯೆ: ಕವಿಪ್ರನಿನಿ/ಬಿ16/44953/2023–24** **ದಿನಾಂಕ:** 25 AUG 2025

**ವಿಷಯ:** ಕಿರಿಯ ಸ್ಟೇಷನ್ ಪರಿಚಾರಕ (ಎನ್.ಕೆ.ಕೆ) ಮತ್ತು ಕಿರಿಯ ಪವರ್‌ಮ್ಯಾನ್ (ಎನ್.ಕೆ.ಕೆ) ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

**ಉಲ್ಲೇಖ:**
1. ನಿಗಮದ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/44953/2023–24(ಕೆ.ಕೆ), ದಿನಾಂಕ: 14.10.2024.
2. ದಾಖಲಾತಿ ಪರಿಶೀಲನೆಗೆ ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/44953/2023–24(DV), ದಿನಾಂಕ: 25.02.2025 ಮತ್ತು 10.03.2025.
3. ಸಹನ ಶಕ್ತಿ ಪರೀಕ್ಷೆ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/44953/2023–24, ದಿನಾಂಕ: 23.04.2025.
4. ತಾತ್ಕಾಲಿಕ ಆಯ್ಕೆ ಪಟ್ಟಿ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/44953/2023–24, ದಿನಾಂಕ: 06.08.2025.

*****

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/44953/2023–24, ದಿನಾಂಕ: 14.10.2024 ಕ್ಕೆ ಅನುಗುಣವಾಗಿ, ನಿಗದಿಪಡಿಸಿದ ಶೈಕ್ಷಣಿಕ ವಿದ್ಯಾರ್ಹತೆಯಲ್ಲಿ (ಎಸ್.ಎಸ್.ಎಲ್.ಸಿ/ 10ನೇ ತರಗತಿ) ಗಳಿಸಿರುವ ಅಂಕಗಳ ಜ್ಯೇಷ್ಠತೆಯ ಆಧಾರದ ಮೇಲೆ, ದಿನಾಂಕ: 05.05.2025 ರಿಂದ 08.05.2025 ರವರೆಗೆ ಅಧಿಸೂಚಿತ ಹುದ್ದೆಗಳ 1:5 ರ ಅನುಪಾತದಲ್ಲಿ ನಡೆಸಲಾದ ಸಹನ ಶಕ್ತಿ ಪರೀಕ್ಷೆಯಲ್ಲಿ ಕಿರಿಯ ಸ್ಟೇಷನ್ ಪರಿಚಾರಕ(ಎನ್.ಕೆ.ಕೆ.) ಮತ್ತು ಕಿರಿಯ ಪವರ್‌ಮ್ಯಾನ್(ಎನ್.ಕೆ.ಕೆ) ಹುದ್ದೆಗಳಿಗೆ ಅರ್ಹರಾದ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಕಟ್–ಆಫ್ (Cut-off) ಅಂಕಗಳೊಂದಿಗೆ, ದಿನಾಂಕ: 06.08.2025 ರಂದು ಕವಿಪ್ರನಿನಿ ಅಂತರ್ಜಾಲ **https://kptcl.karnataka.gov.in/Recruitment** ದಲ್ಲಿ ಪ್ರಕಟಿಸಲಾಗಿರುತ್ತದೆ.

ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಗೆ ನಿಗದಿತ ಕಾಲಾವಧಿಯೊಳಗೆ ಅಭ್ಯರ್ಥಿಗಳು ಸಲ್ಲಿಸಿದ್ದ ಆಕ್ಷೇಪಣೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿದ್ದು, ಅದರನ್ವಯ, ಅಭ್ಯರ್ಥಿಗಳ **ಅಂತಿಮ ಆಯ್ಕೆ ಪಟ್ಟಿಯನ್ನು** ಕಟ್–ಆಫ್ (Cut-off) ಅಂಕಗಳೊಂದಿಗೆ ಕವಿಪ್ರನಿನಿಯ ಅಂತರ್ಜಾಲ **https://kptcl.karnataka.gov.in/Recruitment** ದಲ್ಲಿ ಪ್ರಕಟಿಸಲಾಗಿದೆ.

ಈ ಅಂತಿಮ ಆಯ್ಕೆ ಪಟ್ಟಿಯನ್ನು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಇತ್ಯರ್ಥಕ್ಕಾಗಿ ಬಾಕಿ ಉಳಿದಿರುವ ರಿಟ್ ಅರ್ಜಿ ಸಂಖ್ಯೆ: 200882/2025 ರಲ್ಲಿನ ಅಂತಿಮ ತೀರ್ಪಿಗೊಳಪಟ್ಟು ಪ್ರಕಟಿಸಲಾಗಿದೆ.

**ಕಿರಿಯ ಸ್ಟೇಷನ್ ಪರಿಚಾರಕ (ಎನ್.ಕೆ.ಕೆ)** ಮತ್ತು **ಕಿರಿಯ ಪವರ್‌ಮ್ಯಾನ್(ಎನ್.ಕೆ.ಕೆ)** ಸೂಚಿತ ಹುದ್ದೆಗಳ ಪೈಕಿ ಅರ್ಹ ಅಭ್ಯರ್ಥಿಗಳ ಕೊರತೆಯಿಂದ ಭರ್ತಿಯಾಗದೇ ಉಳಿದಿರುವ ಹುದ್ದೆಗಳನ್ನು ನಿಯಮಾನುಸಾರ ಬ್ಯಾಕ್‌ಲಾಗ್ (Backlog) ಹುದ್ದೆಗಳೆಂದು ಪರಿಗಣಿಸಲಾಗಿದ್ದು, ವಿವರಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ.

**ನಿರ್ದೇಶಕರು**
**(ಆಡಳಿತ ಮತ್ತು ಮಾನವ ಸಂಪನ್ಮೂಲ)**
**ನಿಗಮ ಕಾರ್ಯಾಲಯ, ಕವಿಪ್ರನಿನಿ,**
**ಕಾವೇರಿ ಭವನ, ಬೆಂಗಳೂರು.**

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್) : ಯು40109ಕೆಎ1999ಎಸ್‌ಜಿ025521

**ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/44953/2023–24, ದಿನಾಂಕ: 25.08.2025 ಕ್ಕೆ ಅನುಬಂಧ**

**ವಿವಿಧ ಪ್ರವರ್ಗಗಳ ಅಡಿಯಲ್ಲಿ ಅರ್ಹ ಅಭ್ಯರ್ಥಿಗಳ ಕೊರತೆಯಿಂದ ಬಾಕಿ ಉಳಿದಿರುವ ಬ್ಯಾಕ್‌ಲಾಗ್ (BACKLOG) ಹುದ್ದೆಗಳ ವಿವರ**

**ಹುದ್ದೆಯ ಹೆಸರು: ಕಿರಿಯ ಸ್ಟೇಷನ್ ಪರಿಚಾರಕ (ಎನ್.ಕೆ.ಕೆ):–**

| ಸಮತಳ ಮೀಸಲಾತಿ | ಪ.ಜಾ | ಪ.ವ. | ಸಾಮಾನ್ಯ | ಪ್ರ–1 | ಪ್ರ–2ಎ | ಪ್ರ–2ಬಿ | ಪ್ರ–3ಎ | ಪ್ರ–3ಬಿ | ಒಟ್ಟು |
|---|---|---|---|---|---|---|---|---|---|
| ವಿಕಲಚೇತನ ಅಭ್ಯರ್ಥಿ | 4 | 2 | 8 | 1 | 3 | 1 | 1 | 1 | **21** |
| ಒಟ್ಟು | **4** | **2** | **8** | **1** | **3** | **1** | **1** | **1** | **21** |

**ಹುದ್ದೆಯ ಹೆಸರು: ಕಿರಿಯ ಪವರ್‌ಮ್ಯಾನ್ (ಎನ್.ಕೆ.ಕೆ):**

| ಸಮತಳ ಮೀಸಲಾತಿ | ಪ.ಜಾ | ಪ.ವ. | ಸಾಮಾನ್ಯ | ಪ್ರ–1 | ಪ್ರ–2ಎ | ಪ್ರ–2ಬಿ | ಪ್ರ–3ಎ | ಪ್ರ–3ಬಿ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 0 | 0 | 0 | 0 | 0 | 2 | 0 | 0 | **2** |
| ಗ್ರಾಮೀಣ ಮೀಸಲಾತಿ | 0 | 0 | 0 | 1 | 0 | 1 | 0 | 0 | **2** |
| ವಿಕಲಚೇತನ ಅಭ್ಯರ್ಥಿ | 1 | 1 | 2 | 0 | 1 | 0 | 0 | 0 | **5** |
| ಒಟ್ಟು | **1** | **1** | **2** | **1** | **1** | **3** | **0** | **0** | **9** |

ನಿರ್ದೇಶಕರು (ಆಡಳಿತ ಮತ್ತು ಮಾಸಂ)
ಕವಿಪ್ರನಿನಿ